ಗೌರಿ ಗಣೇಶ ಹಬ್ಬಕ್ಕೆ ಊರಿಗೆ ಹೋಗಿದ್ದ ರಂಜು–ಮೋನು ಅಲ್ಲಿಂದ ಮರಳಿ ಮನೆಗೆ ಬಂದು ವಾರ ಕಳೆಯುತ್ತಾ ಬಂದರೂ ಏಕೋ ಮಂಕಾಗಿದ್ದರು. ದಿನಾ ಆಫೀಸಿನ ಕೆಲಸಕ್ಕೆ ಹೋಗಿ ಬರುತ್ತಿದ್ದ ಮಕ್ಕಳ ತಾಯ್ತಂದೆಯರಿಗೆ ಮಕ್ಕಳೇಕೆ ಹೀಗೆ ಮಂಕಾದರು ಎಂದು ವಿಚಾರಿಸುವುದಕ್ಕೆ ಆಗಲಿಲ್ಲ. ಬೆಳಿಗ್ಗೆ ಹೆಚ್ಚೂ ಕಡಿಮೆ ಎಲ್ಲರೂ ಒಂದೇ ಸಮಯಕ್ಕೆ ಮನೆಯಿಂದ ಹೊರಡಬೇಕಿದ್ದರಿಂದ ದಿನದ ಆರಂಭ ಅವಸರ ಗಡಿಬಿಡಿಯಲ್ಲಿಯೇ ಮುಗಿಯುತ್ತಿತ್ತು.

ಆದರೆ ಶಾಲೆಯಿಂದ ಮನೆಗೆ ಬೇಗ ಬರುತ್ತಿದ್ದ ಮಕ್ಕಳು, ಮನೇಲಿ ಅಜ್ಜಅಜ್ಜಿ ಅಂತ ಹಿರಿಯರು ಯಾರೂ ಇರದೇ ಇದ್ದದ್ದರಿಂದ ತಮ್ಮ ಮನೆಯ ಪಕ್ಕದ ರಸ್ತೆಯಲ್ಲಿದ್ದ ಸುಮಕ್ಕನ ಮನೆಗೆ ಮನೆಪಾಠಕ್ಕೆ ಹೋಗಿ ಅಪ್ಪನೋ ಅಮ್ಮನೋ ಬರೋವರೆಗೂ ಅಲ್ಲೇ ಮನೆಪಾಠ ಹೇಳಿಸಿಕೊಂಡು, ಹೋಂವರ್ಕ್ ಮಾಡಿಕೊಂಡು ಕಾಲ ಕಳೆಯುತ್ತಿದ್ದರು.

ಮನೆಪಾಠ ಹೇಳಿಕೊಡುವ ಸುಮಕ್ಕನಿಗೂ ರಂಜು–ಮೋನುವಿಗೂ ಬಹಳ ಸಲುಗೆ. ಸಣ್ಣ ಮಕ್ಕಳಿಂದ ಕಣ್ಣ ಮುಂದೇ ಬೆಳೆದದ್ದರಿಂದ ಈ ಸಲುಗೆ. ಹಾಗಾಗಿ ಈ ಬಾರಿ ಊರಿಂದ ಮರಳಿದ ಮಕ್ಕಳು ಏಕೋ ಮೊದಲಿನಂತಿಲ್ಲ ಎಂದು ತಕ್ಷಣ ಗೊತ್ತಾಗಿದ್ದು ಸುಮಕ್ಕನಿಗೇ. ಮೊದಲೆಲ್ಲಾ ಈ ಮಕ್ಕಳು ಊರಿನಿಂದ ಬಂದ ಹೊಸದರಲ್ಲಿ ಊರಲ್ಲಿ ತಾವಿಬ್ರೂ ಏನೇನು ಮಾಡಿದ್ವಿ, ಕರು–ಕುರಿ–ಮೇಕೆ ಮರಿಗಳ ಜೊತೆ ಹೇಗೆ ಆಡಿದ್ವಿ, ತೋಟಕ್ಕೆ ಹೋಗಿ ಮಾವಿನ ಮರ ಹತ್ತಿ ಮಾವಿನಹಣ್ಣು ಹೇಗೆ ಕಿತ್ವಿ, ಎಳನೀರುಬುಂಡೆ ಬಾಯಿಗೇ ಹಾಕಿ ಹೇಗೆ ಎಳನೀರು ಕುಡಿದ್ವಿ, ಮಾಮನ ಜೊತೆ ಎಮ್ಮೆ ಮೀಯಿಸಲು ಹೋಗಿ ಕೆರೆಯಲ್ಲಿ ಹೇಗೆ ಈಜಾಡಿದ್ವಿ, ಅಂತ ದಿನಕ್ಕೊಂದರಂತೆ ಊರಲ್ಲಿ ತಾವು ಮಾಡಿದ ಸಾಹಸಗಳ ಪಟ್ಟಿಯನ್ನು ಹುರುಪಿನಿಂದ ಕೊಡ್ತಿದ್ದರು. ಹಾಗೆಯೇ ಅಜ್ಜಿ –ಅಜ್ಜ ಕಳಿಸಿಕೊಟ್ಟ ನುಗ್ಗೇಸೊಪ್ಪು, ನುಗ್ಗೇಕಾಯಿ, ಕರಿಬೇವು, ಹುಣಸೇಹಣ್ಣು, ಹಿತ್ತಲ ಕೀರೆಮಡಿಯ ತಾಜಾ ಸೊಪ್ಪು ಮೊದಲಾದವುಗಳಲ್ಲಿ ಪಾಲೂ ಸಿಗುತ್ತಿತ್ತು. ಆದರೆ ಈ ಬಾರಿ ಮಕ್ಕಳೇ ಬಿಸಿಲಿಗೆ ಬಾಡಿದ ಸೊಪ್ಪಿನಂತೆ ಬಾಡಿ ಬಂದಿರುವುದು ಕಂಡು ಸುಮಕ್ಕಂಗೆ ವಿಪರೀತ ಬೇಜಾರಾಯಿತು. ಆದರೆ ಈ ಬಗ್ಗೆ ಮಕ್ಕಳನ್ನೇ ನೇರ ಕೇಳೋದು ಹೇಗೆ? ಅವರು ಇನ್ನೂ ನೊಂದುಕೊಂಡರೆ ಎಂದುಕೊಂಡು ಸುಮ್ಮನಾದರು. ಎರಡು ಮೂರು ದಿನ ಕಳೆದರೂ ಮೊದಲಿನಂತೆ ತಯಾರಾಗದ ಮಕ್ಕಳನ್ನು ಕಂಡು ಈ ದಿನವಾದರೂ ಮಕ್ಕಳನ್ನು ಕರೆದುಕೊಂಡು ಹೋಗಲು ಯಾರು ಬರುತ್ತಾರೋ ಅವರ ಬಳಿ ಮಾತನಾಡಲೇಬೇಕೆಂದು ಗಟ್ಟಿ ನಿರ್ಧರಿಸಿದರು.

ಸುಮಕ್ಕ ನಿರ್ಧರಿಸಿದಂತೆ, ಆ ದಿನ ಸಂಜೆ ಮಕ್ಕಳನ್ನ ಮನೆಗೆ ಕರೆದುಕೊಂಡು ಹೋಗಲು ಬಂದದ್ದು ಅವರಮ್ಮ ಶಾಲಿನಿ. ಶಾಲಿನಿ ಅವರೊಡನೆ ಮಾತನಾಡುವಾಗ ಮಕ್ಕಳು ತಮ್ಮ ಮುಂದೆ ಇರಬಾರದು ಎಂದುಕೊಂಡು ಸುಮಕ್ಕ ಶಾಲಿನಿಯವರಿಗೆ, "ನಿಮ್ಮೊಡನೆ ಏನೋ ಸ್ವಲ್ಪ ಮಾತನಾಡೋದಿದೆ. ಮಕ್ಕಳನ್ನ ಕಾರಲ್ಲಿ ಕೂರಿಸಿ ಒಂದೆರಡು ನಿಮಿಷ ಬರ್ಲಿಕ್ಕಾಗುತ್ತಾ" ಅಂತ ಕೇಳಿದ್ರು. ದಿನಾ ಮಕ್ಕಳನ್ನು ಕರೆದುಕೊಂಡು ಹೋಗುವಾಗ, ಸಾಮಾನ್ಯವಾಗಿ ಒಂದು ಮುಗುಳುನಗು, ಅಥವಾ ಹೆಚ್ಚೆಂದರೆ, "ನಿಮ್ಮ ಮಕ್ಕಳು ತುಂಬಾ ಜಾಣರು, ವೆರೀ ಸ್ಮಾರ್ಟ್, ಹೋಂವರ್ಕ್ ಮುಗಿಸಿದ್ದಾರೆ, ಮನೇಲಿ ಬರೀಲಿಕ್ಕೆ ಒಂದೆರಡು ಪ್ರಾಬ್ಲಮ್ಸ್ ಕೊಟ್ಟಿದ್ದೀನಿ, ದೇ ಆರ್ ವೆರೀ ಸೆನ್ಸಿಟಿವ್ ಕಿಡ್ಸ್..." ಹೀಗೆ ಮಕ್ಕಳ ಮುಂದೆಯೇ ಏನಾದರೂ ಹೇಳ್ತಿದ್ದ ಸುಮ ಮೇಡಂ, ಇಂದು ಏನೋ ವಿಶೇಷ ಇದೆ ಅನ್ನೋ ಹಾಗೆ ಮಾತನಾಡ್ತಿದ್ದಾರಲ್ಲಾ ಅಂದ್ಕೊಂಡು ಶಾಲಿನಿ, "ಶ್ಯೂರ್ ಮೇಡಂ, ಐಲ್ ಬಿ ಬ್ಯಾಕ್, ಕಮಾನ್ ಕಿಡ್ಸ್" ಎನ್ನುತ್ತಾ ಇಬ್ಬರ ಬ್ಯಾಗ್‌ಗಳನ್ನೂ ಕೈಲಿ ಹಿಡಿದುಕೊಂಡು ಕಾರೊಳಗೆ ಇಟ್ಟು ಮಕ್ಕಳಿಗೆ, "ಇಲ್ಲೇ ಕುಳಿತಿರಿ, ಬೇಗ ಬರ್ತೀನಿ. ಡೋಂಟ್ ಫೈಟ್" ಎಂದು ಹೇಳಿ ಸುಮಕ್ಕ ಬಳಿ ಬಂದರು.

"ಏನು ಸುಮಾ ಮೇಡಂ, ಆಲ್ ಓಕೆ? ಮಕ್ಕಳ ವಿಷಯ ಏನಾದ್ರೂ ಹೇಳೋದು ಇತ್ತಾ? ಈಸ್ ದೇರ್ ಎನೀ ಪ್ರಾಬ್ಲಂ? ಓದಿನಲ್ಲಿ ಹಿಂದುಳಿದಿದ್ದಾರ? ಆರ್ ದೇ ಟ್ರಬಲಿಂಗ್ ಅದರ್ಸ್?! ಬೇರೆ ಮಕ್ಕಳೊಡನೆ ಸರಿಯಾಗಿ ಹೊಂದಿಕೊಂಡು ಹೋಗುತ್ತಿದ್ದಾರ? ಡೋಂಟ್ ಬಾದರ್ ಮೇಡಂ, ನೆಗಟಿವ್ ಏನೇ ಇದ್ರೂ ಹೇಳಲಿಕ್ಕೆ ಏನೂ ಸಂಕೋಚ ಪಡಬೇಡಿ. ಮಕ್ಕಳ ಮುಂದೆ ಚರ್ಚಿಸದೇ ನನ್ನ ಬಳಿಯೇ ಪರ್ಸನಲ್ ಆಗಿ ಮಾತನಾಡಬೇಕಂದ್ರೆ ಯು ನೋಟೀಸ್ಡ್ ಸಂಥಿಂಗ್ ಅನ್ನಿಸ್ತಿದೆ. ಪ್ಲೀಸ್ ಲೆಟ್ ಮಿ ನೋ..." ಎಂದು ಬಹಳ ಕಳಕಳಿಯಿಂದ ಕೇಳಿದರು ಶಾಲಿನಿ.

ಶಾಲಿನಿಯವರ ಮಾತಿನಲ್ಲಿ ಗಾಬರಿ, ಆತಂಕ ಗುರುತಿಸಿದ ಸುಮಾಗೆ, 'ಛೇ ಏಕಿವರು ಇಷ್ಟು ಸೆನ್ಸಿಬಲ್ ಆಗಿ ರಿಯಾಕ್ಟ್ ಮಾಡ್ತಿದ್ದಾರೆ?' ಎನಿಸಿತು. ಮೆಲ್ಲನೆ ನಿಧಾನ ದನಿಯಲ್ಲಿ, "ಪ್ಲೀಸ್ ಮೇಡಂ, ನೀವು ಹೀಗೆ ಆತಂಕಗೊಳ್ಳುವ ಅಗತ್ಯವಿಲ್ಲ. ನಿಮ್ಮ ಮಕ್ಕಳು ಯಾವತ್ತೂ ಜಾಣರೇ. ಆದರೆ, ಊರಿನಿಂದ ಬಂದ ಮೇಲೆ ದೇ ಬಿಕಮ್ ಟೂ ಸೈಲೆಂಟ್. ಏಕೋ ಬಹಳ ಮಂಕಾಗಿದ್ದಾರೆಂದು ನನಗೆ ಭಾಸವಾಗುತ್ತಿದೆ. ಇಸ್ ಎವರಿಥಿಂಗ್ ಓಕೆ ಎಟ್ ದೇರ್? ಎಲ್ಲಾ ಕ್ಷೇಮ ತಾನೆ?" ಎಂದು ಕೇಳಿದರು. ಮಕ್ಕಳ ಬಗ್ಗೆ ಹೀಗೆ ವೈಯಕ್ತಿಕವಾಗಿ ಕಾಳಜಿ ತೋರಿದ ಸುಮಾ ಮೇಡಂ ಬಗ್ಗೆ ಶಾಲಿನಿಗೆ ಅಭಿಮಾನ ಮೂಡಿತು. ಜೊತೆಗೆ ಮಕ್ಕಳು ಮೊದಲಿನ ಹಾಗೆ ಲವಲವಿಕೆಯಿಂದ ಇಲ್ಲ ಎನ್ನುವುದು ತನ್ನ ಗಮನಕ್ಕೆ ಬರುತ್ತಿದ್ದರೂ ತನಗೆ ಆ ಕುರಿತು ಸರಿಯಾಗಿ ಗಮನ ಹರಿಸಲು ಆಗುತ್ತಿಲ್ಲವಲ್ಲ ಎಂದು ವೈಯಕ್ತಿಕ ಸಂಕಟವೂ ಆಯಿತು.

ಸುಮಕ್ಕ ಅವರಿಗೆ ಥ್ಯಾಂಕ್ಸ್ ಹೇಳುತ್ತಾ, 'ಯು ಆರ್ ರೈಟ್ ಮೇಡಂ, ಮಕ್ಕಳು ಈ ನಡುವೆ ತೀರಾ ಅನ್ಯಮನಸ್ಕರಾಗುತ್ತಿದ್ದಾರೆ. ಮೊದಮೊದಲು ನಾನೂ ಸಹ ಬೆಳೆಯುತ್ತಿದ್ದಾರಲ್ಲಾ ಹಾಗಾಗಿ ಇಬ್ಬರೂ ಪರ್ಸನಲ್ ಸ್ಪೇಸ್ ಕಂಡುಕೊಳ್ಳುತ್ತಿದ್ದಿರಬಹುದು ಎಂದುಕೊಂಡಿದ್ದೆ. ಆದರೆ ಈಗ ನೀವು ಹೇಳಿದ್ದು ಕೇಳಿದರೆ ಐ ಹ್ಯಾವ್ ಟು ಟೇಕ್ ಎಕ್ಸ್ ಟ್ರಾ ಕೇರ್ ಅನ್ನಿಸ್ತಿದೆ. ಮಕ್ಕಳು ಊರಿನಿಂದ ಬಂದ ಮೇಲೆಯೇ ಹೀಗೆ ಚೇಂಜ್ ಕಾಣ್ತಿರೋದು ಟ್ರೂ. ಊರಿಗೆ ಹೋಗುವಾಗ ದೇ ಫೀಲ್ ವೆರಿ ಹ್ಯಾಪಿ. ಆದರೆ ಮರಳಿ ಬರುವಾಗ ಸಪ್ಪೆಮುಖ ಹೊತ್ತಿದ್ದರು. ಅಲ್ಲದೆ ಈಗೀಗ ದೇ ಬೋತ್ ಸ್ಪೆಂಡ್ ಮೋರ್ ಟೈಂ ಅಟ್ ದೆಯರ್ ರೂಂ. ಇಬ್ಬರೂ ತಮ್ಮ ರೂಂನಲ್ಲಿ ಬಹಳ ಹೊತ್ತು ಕಾಲಕಳೀತಿದ್ದಾರೆ. ಏನೇನೋ ಗುಸುಗುಸು ಮಾತಾಡಿಕೊಳ್ಳುತ್ತಿರ್ತಾರೆ. ನಾನೋ ಇಲ್ಲ ನನ್ನ ಹಸ್ಬೆಂಡ್ ಯಾರಾದರು ಎಂಟ್ರಿ ಆದ ತಕ್ಷಣ ದೇ ಸ್ಟಾಪ್ ಟಾಕಿಂಗ್. ಮಾತು ನಿಲ್ಲಿಸಿ ಪುಸ್ತಕದೊಳಗೆ ತಲೆತೂರಿಸಿಕೊಂಡು ಬಿಡುತ್ತಾರೆ! ಇದೇನೋ ಹೊಸ ಮಕ್ಕಳಾಟವೆಂದು ಮಾಡಿದ್ದೆ ನಾನು. ಬಟ್ ವೆನ್ ಯು ನೋಟೀಸ್ಡ್ ದೆಯರ್ ಬಿಹೇವಿಯರ್ ಇಸ್ ಸೇಮ್ ಎಟ್